ಅ) ಆಯ್ಕೆಯಾದ ಪುಸ್ತಕಗಳು 15 ಹೆಸರುಗಳು ಈ ಕೆಳಕಂಡಂತಿದೆ :

1) ಜೊತೆಯಲ್ಲಿ ಇರುವವರು
2) ಚಿನ್ನಾರಿ
3) ಪಂಜೆಮೆಂಗೇಶರಾವ್
4) ತೋಟದ ಆಟ
5) ಕಥಾ ಕುಸುಮಗಳು
6) ಹಳ್ಳಿ ಹೇಳಿದ ಕಥೆ
7) ಕೋಗಿಲೆ ಕಿರೀಟ
8) ಮಗು ನೀ ನೆನಪಿರು
9) ಅಭಯಾರಣ್ಯದಲ್ಲಿ ಒಂದು ಅನುಭವ
10) ಹಿರಿಯರ ಕಥೆಗಳು
11) ತುಂಟರ ಕ್ರಿಕೆಟ್
12) ಚಂದಕ್ಕಿ ಮಾಮ
13) ಆಕಾಶದ ಅಂಚು
14) ನಮ್ಮ ನೆಚ್ಚಿನ ಬಾಪೂಜಿ
15) ವೀರ ಪುಟಾಣಿ

ಗೌರವ ಧನ ಒಬ್ಬರಿಗೆ 2000.00 ದಂತೆ ನಿಗದಿ ಪಡಿಸಲು ಕ್ರಮ ಕೈಗೊಳ್ಳಲಾಗಿದೆ.

ಇ) ಶಿಶುಸಾಹಿತ್ಯ ಮಕ್ಕಳಲ್ಲಿ ಮನೋರಂಜನೆಯನ್ನು ಉಂಟು ಮಾಡುವುದರ ಜೊತೆಗೆ ಬೋಧಪ್ರದವಾಗಿರಬೇಕು ಎಂಬುದು ಮುಖ್ಯ ಉದ್ದೇಶ. ಮಕ್ಕಳಲ್ಲಿ ರಾಷ್ಟ್ರೀಯ ಮನೋಭಾವನೆ, ಪರಿಸರದ ಬಗ್ಗೆ ಕಾಳಜಿ, ಮುಂತಾದ ಉತ್ತಮ ಮೌಲ್ಯಗಳನ್ನು ಬೆಳೆಸಬೇಕೆಂಬುದು ಈ ಯೋಜನೆಯ ಉದ್ದೇಶ, ಈ ಪ್ರಮುಖ ಉದ್ದೇಶಗಳ ಆಧಾರದ ಮೇಲೆ ಪುಸ್ತಕಗಳನ್ನು ಆಯ್ಕೆ ಮಾಡಲು ಸಾಹಿತ್ಯಕ್ಕೆ ಸಂಬಂಧಿಸಿದಂತೆ ಐದು ಪರಿಶೀಲನಾ ಸಮಿತಿಗಳನ್ನು ರಚಿಸಿ ಅವರಿಂದ ಆಯ್ಕೆಯಾದ ಪುಸ್ತಕಗಳನ್ನು ಅಂತಿಮವಾಗಿ ಇನ್ನೊಂದು ಪರಿಷ್ಕರಣ ಸಮಿತಿಯಲ್ಲಿ ಶ್ರೀಮತಿ ವಿ. ಗಾಯಿತ್ರಿದೇವಿ ಉಪನ್ಯಾಸಕರ ಕನ್ನಡ ವಿಭಾಗ ಎನ್.ಎಂ.ಕೆ.ಆರ್.ವಿ. ರವರ ನೇತೃತ್ವದಲ್ಲಿ ಆಯ್ಕೆ ಮಾಡಲಾಗಿದೆ. ಈ ಸಮಿತಿ ಆಯ್ದ ಪುಸ್ತಕಗಳ ಸಂಪೂರ್ಣ ಹಕ್ಕುಗಳನ್ನು ಡಿ.ಎಸ್.ಇ.ಆರ್. ಟಿ. ಇಲಾಖೆಯು ಪಡೆದು ತಾನೇ ಪ್ರಕಟಿಸುವ ಆಲೋಚನೆ ಹೊಂದಿದೆ. ಪ್ರತಿ ವರ್ಷವೂ ಈ ರೀತಿ ವಿವಿಧ ಸಂಪುಟಗಳಲ್ಲಿ ಶಿಶುಸಾಹಿತ್ಯ ಪ್ರಕಟಣೆಗೆ ಮುಂದಾಗಬೇಕೆಂಬ ಉದ್ದೇಶ ಸರ್ಕಾರ ಹೊಂದಿದೆ.

ಸಾರ್ವಜನಿಕ ಶಿಕ್ಷಣ ಇಲಾಖೆಯಲ್ಲಿ ದ್ವಿತೀಯ ದರ್ಜೆಯ ಸಹಾಯಕರ ಬಡ್ತಿ.

1575 - ಶ್ರೀ ಕುಂಬೈ ಸಂದರರಾವ್ (ಸುರತ್ಕಲ್) : ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು. ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸಾರ್ವಜನಿಕ ಶಿಕ್ಷಣ ಇಲಾಖೆಯಲ್ಲಿ ದ್ವಿತೀಯ ದರ್ಜೆ ಸಹಾಯಕರ ಹುದ್ದೆಯಿಂದ ಪತ್ರಾಂಕಿತ ಸಹಾಯಕರವರೆಗಿನ ಬೋಧಕೇತರ ಹುದ್ದೆಗಳಿಗೆ ನಿಯಮ 32ರ ಅಡಿಯಲ್ಲಿ ಬಡ್ತಿ ನೀಡುತ್ತಿರುವುದು ಮುಂದುವರಿದಿದೆಯಲ್ಲವೆ?

ಅ) *ಈ ನೌಕರರಿಗೆ ಖಾಯಂ ಬಡ್ತಿ ನೀಡಲು ಇರುವ ಅಡಚಣೆಗಳೇನು ? ಯಾವಾಗ ಖಾಯಂ ಬಡ್ತಿ ನೀಡಲಾಗುವುದು ?*

ಇ) *ಇಂತಹ ಪ್ರಕರಣಗಳಲ್ಲಿ ಈಗಾಗಲೇ ಕೆಲವು ನೌಕರರು ನಿವೃತ್ತಿ ಮತ್ತು ನಿಧನ ಹೊಂದಿದ್ದು ಅವರುಗಳಿಗೆ ಸಿಗಬೇಕಾದ ಸವಲತ್ತುಗಳಿಗೆ ಯಾವ ಕ್ರಮಗಳನ್ನು ಕೈಗೊಳ್ಳಲಾಗಿದೆ ?*

ಶ್ರೀ ಹೆಚ್.ಜಿ. ಗೋವಿಂದೇಗೌಡ (ಉನ್ನತ ಮತ್ತು ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರು) :

ಅ) ಇಲ್ಲ.

ಆ) ಈ ಹಿಂದೆ ಪ್ರಕಟಿಸಿದ ಜೇಷ್ಠತಾ ಪಟ್ಟಿಗಳಲ್ಲಿನ ನೂನ್ಯತೆಯಿಂದ ಖಾಯಂ ಬಡ್ತಿ ನೀಡಲು ಅಡಚಣೆಯಾಗಿತ್ತು. ದ್ವಿತೀಯ ದರ್ಜೆ ಸಹಾಯಕರ ಮತ್ತು ಪ್ರಥಮ ದರ್ಜೆ ಸಹಾಯಕರ ವೃಂದದ ಪರಿಷ್ಕೃತ ಜೇಷ್ಠತಾಪಟ್ಟಿಯನ್ನು ಪ್ರಕಟಿಸಿದ್ದು, ಈ ಆಧಾರದ ಮೇಲೆ ಕೆಸಿಎಸ್ಆರ್ ನಿಯಮ 32ರನ್ವಯ ಕಾರ್ಯನಿರ್ವಹಿಸುತ್ತಿರುವವರಿಗೆ ಖಾಯಂ ಬಡ್ತಿ ನೀಡಲಾಗುವುದು ಮತ್ತು ಅಧೀಕ್ಷಕರ ಅಂತಿಮ ಜೇಷ್ಠತಾಪಟ್ಟಿಯನ್ನು ಪ್ರಕಟಿಸಿದ ತರುವಾಯ ಮತ್ತು ಮ್ಯಾನೇಜರ್ ಹುದ್ದೆಯ ಸಿ ಅಂಡ್ ಆರ್ ನಿಯಮ ರಚನೆ ಆದ ನಂತರ ಈ ಹುದ್ದೆಗೆ ಬಡ್ತಿ ನೀಡಲಾಗುವುದು.

ಇ) ಈ ವೃಂದದವರ ಬಡ್ತಿಯನ್ನು ಪುನರ್ ಅವಲೋಕನ ಮಾಡಿದಾಗ ಸ್ಥಾನವನ್ನು ಬಡ್ತಿ ಹೊಂದುವ ಮುಂಚೆ ನಿವೃತ್ತಿ ಹೊಂದಿದವರಿಗೆ ಮತ್ತು ಮರಣ ಹೊಂದಿದವರಿಗೆ ಬಡ್ತಿ ಹುದ್ದೆಗಳ ಲಭ್ಯತೆಗನುಗುಣವಾಗಿ ಅರ್ಹತಾ ದಿನಾಂಕವನ್ನು ನಿಗಧಿಪಡಿಸಿ ನಿಯಮಾನುಸಾರ ವೇತನ ಸೌಲಭ್ಯ ನೀಡಲಾಗುವುದು.

ದಕ್ಷಿಣ ಕನ್ನಡದಲ್ಲಿರುವ ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ಖಾಲಿ ಇರುವ ಆರೋಗ್ಯ ಸಹಾಯಕರ ಹುದ್ದೆಗಳು.

1576 - ಶ್ರೀ ಕುಂಭೆ ಸುಂದರರಾವ್ (ಸುರತ್ಕಲ್) : ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು. ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) *ದಕ್ಷಿಣ ಕನ್ನಡ ಜಿಲ್ಲೆಯಲ್ಲಿರುವ ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿರುವ ಆರೋಗ್ಯ ಸಹಾಯಕರುಗಳ ಹುದ್ದೆ ಎಷ್ಟು ? (ಮಹಿಳಾ ಮತ್ತು ಪುರುಷ ಆರೋಗ್ಯ ಸಹಾಯಕರ ವಿವರ ನೀಡುವುದು)*

ಆ) *ಇದರಲ್ಲಿ ಭರ್ತಿಗೊಂಡ ಕಿರಿಯ ಆರೋಗ್ಯ ಸಹಾಯಕರ ಸಂಖ್ಯೆ ಎಷ್ಟು ? (ಮಹಿಳೆ ಮತ್ತು ಪುರುಷರ ವಿವರ ನೀಡುವುದು)*

ಇ) *ನಗರ ಮತ್ತು ಗ್ರಾಮೀಣ ಪ್ರದೇಶದಲ್ಲಿ ಕುಟುಂಬ ಕಲ್ಯಾಣ ಹಾಗೂ ಮಲೇರಿಯಾ ನಿರ್ಮೂಲನದ ಕ್ರಮ ಕುರಿತು ಸರಕಾರ ಯಾವ ಕ್ರಮಗಳನ್ನು ಕೈಗೊಂಡಿದೆ.*